A Jain Institution
Sitadevi Ratanchand Nahar
ADARSH EVENING COLLEGE
(Affiliated to Bengaluru City University)

# CAMPUS ಕಲರವ

## ಕನ್ನಡ ರಾಜ್ಯೋತ್ಸವದ ವಿಶೇಷ ಸಂಚಿಕೆ ನವೆಂಬರ್ – 2025

### ಅತಿಥಿಗಳ ಅನಿಸಿಕೆ



ದಿನಾಂಕ : 22/11/25ರಂದು ಆದರ್ಶ ಸಂಜೆ ಕಾಲೇಜಿನ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಅತಿಥಿಯಾಗಿ ಭಾಗವಹಿಸಿದ್ದು ನನಗೆ ಅತ್ಯಂತ ಸಂತಸ ನೀಡಿದೆ. ಅದಕ್ಕೆ ಎರಡು ಕಾರಣಗಳನ್ನು ಕೊಡಬಲ್ಲೆ.ಒಂದು ಅದು ಸಂಜೆ ಕಾಲೇಜು ಅಂತ.ನಾನು ಸಂಜೆ ಕಾಲೇಜಿನಲ್ಲಿ 35 ವರ್ಷಗಳ ಕಾಲ ಪಾಠ ಮಾಡಿದವನು. ಸಂಜೆ ಕಾಲೇಜಿನ ಮಕ್ಕಳ ಕಷ್ಟಗಳನ್ನು ಅರಿತವನು.ಅವರ ಸಮಸ್ಯೆಗಳು ಯಾವ ಮಟ್ಟದ್ದು ಎಂಬುದು ಸಂಪೂರ್ಣ ಅರಿವಿದ್ದವನು ,.ಆದ್ದರಿಂದಲೇ ಅವರೊಡನೆ ಅತ್ಯಂತ ಆತ್ಮೀಯ ಒಡನಾಟ ನನಗಿತ್ತು.

ಸಂಜೆ ಕಾಲೇಜಿನ ಮಕ್ಕಳು ಯಾವುದಾದರೂ ಒಂದು ಕಾರ್ಯಕ್ರಮವನ್ನು ಮಾಡುತ್ತಾರೆಂದರೆ ಅದರ ಹಿಂದೆ ಪರಿಶ್ರಮವು ಸಂಭ್ರಮವು ಒಟ್ಟೊಟ್ಟಿಗೆ ಇರುತ್ತದೆ. ಹಗಲಿನಲ್ಲಿ ದುಡಿದು ಸಂಜೆ ಹೊತ್ತಿನಲ್ಲಿ ಕಾಲೇಜಿಗೆ ಬರುವ ಮಕ್ಕಳ ಮನಸ್ಥಿತಿ ನನಗೆ ಚೆನ್ನಾಗಿ ಗೊತ್ತು. ಅಂತಹ ಮಕ್ಕಳು ತಮಗಿರುವ ಬಿಡುವಿನ ಸಮಯದಲ್ಲೇ ಕಾಲೇಜಿನಲ್ಲಿ ನಡೆಯುವ ಕಾರ್ಯಕ್ರಮಗಳನ್ನು ಅಭ್ಯಾಸ ಮಾಡುವ ಮತ್ತು ಸಂಭ್ರಮದಿಂದ ಆಚರಿಸುವ ಸಂದರ್ಭ ನಮಗೆಲ್ಲ ಅರ್ಥ ಆಗಬೇಕು.

ಮತ್ತೊಂದು ಖುಷಿಯ ಸಂಗತಿ ಎಂದರೆ ಅದು ರಾಜ್ಯೋತ್ಸವದ ಕಾರ್ಯಕ್ರಮ ಎಂಬುದು.ಆದರ್ಶ ಕಾಲೇಜಿನ ಪ್ರಾಂಶುಪಾಲರಾದಿಯಾಗಿ ಎಲ್ಲ ಸಿಬ್ಬಂದಿ ವರ್ಗ ಬಹಳ ಅಚ್ಚುಕಟ್ಟಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಅತ್ಯಂತ ಸಂತಸದ ಸಂಗತಿ.ಮಕ್ಕಳು ಕಡಿಮೆ ಸಂಖ್ಯೆಯಲ್ಲಿದ್ದರೂ ಇಂತಹ ಅವಕಾಶ ಮಾಡಿಕೊಟ್ಟಿರುವ ಆಡಳಿತ ಮಂಡಳಿಗೆ ಅಭಿನಂದನೆಗಳು. ವಿದ್ಯಾರ್ಥಿಗಳು ಕೇವಲ 40 ನಿಮಿಷದಲ್ಲಿ ನಾಡು ನುಡಿಗೆ ಸಂಬಂಧಿಸಿದಂತಹ, ಜೊತೆಗೆ ಪ್ರಸ್ತುತವಾದಂತಹ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ನಾಡು ನುಡಿ ಹೆಸರಿನಲ್ಲಿ ವಿದ್ಯಾರ್ಥಿಗಳ ಪ್ರತಿಭಾ ಪ್ರಕಾಶನಕ್ಕೆ ಅವಕಾಶವಾಯಿತು.

ವೇದಿಕೆಯಲ್ಲಿ ಬಹಳಷ್ಟು ವಿದ್ಯಾರ್ಥಿಗಳು ಸೇರಿ ಇರುವ ಅಲ್ಪ ಸಮಯದಲ್ಲೇ ಉತ್ತಮ ಪ್ರದರ್ಶನವನ್ನು ನೀಡುವುದರ ಮೂಲಕ ರಾಜ್ಯೋತ್ಸವವನ್ನು ಯಶಸ್ವಿಯಾಗಿಸಿದರು. ಇಂತಹ ಕಾರ್ಯಕ್ರಮಗಳು ಎಲ್ಲ ಮಕ್ಕಳು ಭಾಗಿಯಾಗುವಂತೆ ಮಾಡುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಧೈರ್ಯಸ್ಥೈರ್ಯಗಳು ಮೂಡುವಂತಾಗುತ್ತವೆ. ಇಂತಹ ಕಾರ್ಯಕ್ರಮ ನಡೆಯಲು ಅವಕಾಶ ಮಾಡಿಕೊಟ್ಟಂತಹ ಆಡಳಿತ ಮಂಡಳಿಗೆ, ಪ್ರಾಂಶುಪಾಲರಿಗೆ, ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿದ್ಯಾರ್ಥಿಗಳಿಗೆ ಶುಭಾಶಯಗಳು ಕೋರುತ್ತೇನೆ.

**–ಚಂದ್ರಶೇಖರ ನಾದೂರು**
ನಿವೃತ್ತ ಪ್ರಾಂಶುಪಾಲರು




ಎಸ್.ಆರ್.ಎನ್.ಆದರ್ಶಸಂಜೆ ಕಾಲೇಜಿನಲ್ಲಿ ನಡೆದ 70ನೇ ಕನ್ನಡ ರಾಜ್ಯೋತ್ಸವ ಸಮಾರಂಭ ಬಹಳ ಅಚ್ಚುಕಟ್ಟಾಗಿ ನೆರವೇರಿಸಲಾಗಿತ್ತು. ಕಾಲೇಜಿಗೆ ಬಂದೊಡನೆ ಭಾಷೆಯ ಕಡೆಗಾಣಿಸೋ ಸಮಯದಲ್ಲಿ, ಅಲ್ಲಿನ ವಿದ್ಯಾರ್ಥಿಗಳು ಹಾಗೂ ಕಾಲೇಜಿನ ಆಡಳಿತ ಮಂಡಳಿಯ ಉತ್ಸಾಹ ಮತ್ತು ಕನ್ನಡದ ಮೇಲಿನ ಕಳಕಳಿ ವಿಶಿಷ್ಟವಾಗಿತ್ತು. ಕನ್ನಡದ ಬಗ್ಗೆ ಅಸಡ್ಡೆ ತೋರುವವರಿಗೆ ಕನ್ನಡ ಕಲಿಸುವ ಪರಿಕಲ್ಪನೆಯ ಸಾಂಸ್ಕೃತಿಕ ಕಾರ್ಯಕ್ರಮ ತುಂಬಾ ಚೆನ್ನಾಗಿ ಮೂಡಿಬಂತು. ನಾನಲ್ಲಿ ಮುಖ್ಯ ಅತಿಥಿ ಎನ್ನುವುದ ಮರೆತು ಕಾರ್ಯಕ್ರಮದಲ್ಲಿ ಇನ್ನೊಬ್ಬ ವಿದ್ಯಾರ್ಥಿಯ ಹಾಗೇ ತಲ್ಲೀನನಾದೆ. ಇದೇ ಅಲ್ಲವೆ ಯಾವುದೇ ಸಮಾರಂಭದ ಉದ್ದೇಶ.ಅದು ಇಲ್ಲಿ ಸಾಕಾರವಾಗಿದೆ ಎಂದು ಹೇಳಲು ಬಯಸುತ್ತೇನೆ. ನನ್ನನ್ನು ಆಹ್ವಾನಿಸಿದ ಕಾಲೇಜಿನ ಆಡಳಿತ ಮಂಡಳಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಇರಲಿ ಭಾವನೆ ಜಗದಿ ಭಾವೈಕ್ಯದೊಳಗೆ
ಜನರ ಭಾಗಿಸದೆ ಕೂಡಿಸುವ ಕೈಂಕರ್ಯದೊಳಗೆ
ಕನ್ನಡ ನಾಡೆಂದೂ ಸಾರ್ಥಕ ಈ ವಿಷಯಗಳಿಗೆ .
ಸಿರಿಗನ್ನಡಂ ಗೆಲ್ಗೆ
ಸರಿಗನ್ನಡಂ ಬಾಳ್ಗೆ
ಸವಿಗನ್ನಡಂ ನಮ್ಮ ನಾಡಿಗೆ!

ಆದರ್ಶ ಸಂಜೆ ಕಾಲೇಜಿನಲ್ಲೊಂದು ಸಂಜೆ
ನಾ ಕಂಡೆ ಕನ್ನಡ ರಾಜ್ಯೋತ್ಸವದ ರಸಸಂಜೆ
ಹೊಸ ಅಲೆಯ ನವ ಬಗೆಯ ಕನ್ನಡದ ಕಲರವ
ತಂದಿತು ಅತಿಥಿಗಳ ಕಣ್ಣಲ್ಲಿ ರೋಮಾಂಚನವ
ಕಲಾಕಾರರಿಗೇನು ಕೊರತೆ ಅಲ್ಲಿ?
ಬೆನ್ತಟ್ಟುವ ಗುರುಗಳಿರುವ ಜಾಗದಲ್ಲಿ
ಮೊಳಗಲೀ ಹೀಗೆ ನಿಮ್ಮ ಕನ್ನಡದ ಡಿಂಡಿಮ
ಮೂಡಿಸುತ ಎಲ್ಲರಲಿ ಕನ್ನಡದ ಚೇತನವ

**-ಶ್ರೀ ಧರ್ಮರಾಜು ಎಂ. ಕೆ.**
ಕವಿ, ಗೀತರಚನೆಕಾರರು



**ಜೀವಂತವಾದ ಯಾವ ಭಾಷೆಯು ತಾನು ಕಡಿಮೆ ಯೋಗ್ಯತೆಯ ಭಾಷೆಯೆಂದು ಕುಗ್ಗಬಾರದು.**
**ಕನ್ನಡ ಜಗತ್ತಿನ ಯಾವ ಭಾಷೆಗೂ ಕಡಿಮೆಯದಲ್ಲ.**

**– ಮಾಸ್ತಿ ವೆಂಕಟೇಶ ಅಯ್ಯಂಗಾರ್**

# CAMPUS ಕಲರವ

ಎಸ್ ಆರ್ ಎನ್ ಆದರ್ಶ ಸಂಜೆ ಕಾಲೇಜಿನಲ್ಲಿ ದಿನಾಂಕ 22/11/2025ರ ಶನಿವಾರದಂದು 70ನೇ ಕನ್ನಡ ರಾಜ್ಯೋತ್ಸವವನ್ನು ಬಹಳ ವಿಜೃಂಭಣೆಯಿಂದ ಆದರಿಸಲಾಯಿತು.

ಪ್ರಥಮ ಬಿ. ಕಾಂ ವಿದ್ಯಾರ್ಥಿನಿಯಾದ ಶ್ರೀರಕ್ಷಾ ಬಿ ಎಸ್ ಅವರ ಪ್ರಾರ್ಥನೆ ಮತ್ತು ಮುಖ್ಯ ಅತಿಥಿಗಳು ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮ ಆರಂಭವಾಯಿತು.

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯೆಂದರೆ ಮುಖ್ಯ ಅತಿಥಿಗಳು. ಶ್ರೀ ಚಂದ್ರಶೇಖರ್ ನಾದೂರು ಮತ್ತು ಧರ್ಮರಾಜ್ ಎಂ ಕೆ ಅವರು ಕಾರ್ಯಕ್ರಮದ ಅತಿಥಿಗಳಾಗಿ ಆಗಮಿಸಿದ್ದರು.

ಚಂದ್ರಶೇಖರ್ ನಾದೂರು ಅವರು ಕನ್ನಡ ಭಾಷೆಯ ಮಹತ್ವ, ನೂರು ವರ್ಷದ ಹಿಂದೆ ನಡೆದ ಕನ್ನಡ ಚಳುವಳಿಗಳ ಕುರಿತು ತಿಳಿಸುತ್ತಾ ನಮ್ಮ ಕನ್ನಡ ಭಾಷೆಯ ವೈಶಿಷ್ಟ್ಯ, ವೈಭವೀಕರಣವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಮತ್ತೋರ್ವ ಅತಿಥಿಗಳಾದ ಶ್ರೀ ಧರ್ಮರಾಜ್ ಎಂ ಕೆ ಅವರು ತಮ್ಮ ಸ್ವರಚಿತ ಕವಿತೆಗಳ ಮೂಲಕ ಕನ್ನಡ ಭಾಷೆಯ ಕುರಿತು ಜಾಗೃತಿ ಮೂಡಿಸಿದರು ಜೊತೆಗೆ ಅವರ ಗಾಯನದ ಮೂಲಕ ವಿದ್ಯಾರ್ಥಿಗಳನ್ನು ರಂಜಿಸಿದರು. ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಾರಂಭವಾದವು.

ಮೊದಲಿಗೆ ಚೈತನ್ಯ ತಂಡದವರಿಂದ ನೃತ್ಯ ಪ್ರದರ್ಶನ, ಯಶ್ವಂತ್ ಮತ್ತು ತಂಡದವರಿಂದ ಪ್ರಸ್ತುತ ಬೆಂಗಳೂರಿನಲ್ಲಿನ ಕನ್ನಡದ ಪರಿಸ್ಥಿತಿ ಕುರಿತ ಕಿರು ನಾಟಕ ಪ್ರದರ್ಶನ, ಪ್ರಥಮ ಬಿ. ಕಾಂ ವಿದ್ಯಾರ್ಥಿನಿಯಾದ ಪೂಜಾ ಮತ್ತು ಭುವನೇಶ್ವರಿ ಅವರಿಂದ ಕನ್ನಡ ಭಾಷೆ ಕುರಿತ ಮಾಹಿತಿ ಹಂಚಿಕೆ, ಅಂತಿಮವಾಗಿ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ನಡಿಗೆಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಪ್ರಾಂಶುಪಾಲರಾದ ಶ್ರೀ ದೀಕ್ಷಿತ್ ಯೋಗೇಶ್ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ತೃತೀಯ ಬಿ. ಕಾಂ ವಿದ್ಯಾರ್ಥಿನಿಯಾದ ಶಾಲಿನಿ ಬಿ ಎ ಅವರು ಕಾರ್ಯಕ್ರಮದ ನಿರೂಪಣೆ ಅಚ್ಚುಕಟ್ಟಾಗಿ ನಿರ್ವಹಿಸಿದರು.

ಮಕ್ಕಳಿಗೆ ಲಘು ಉಪಹಾರದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.









